ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆ:5017/2018

ಪ್ರಾ ಸಾ2 ಚಾ ಸಾ 3

ಹೆಸರುಃ ರುತೀಶ್

ತಂದೆಯ ಹೆಸರುಃ ಸಣ್ಣಬೋರಯ್ಯ

ವಯಸ್ಸುಃ 15 ವರ್ಷ

ಉದ್ಯೋಗಃ ವಿದ್ಯಾರ್ಥಿ

ವಾಸಃ ಆರತಿಹುಕ್ಕಡ

ಸಾಕ್ಷಿಯನ್ನು ದಿಃ 17.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ
ವಚನ ಬೋಧಿಸಲಾಯ್ತು.

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

1. ನ್ಯಾಯಾಲಯದ ಮುಂದಿರುವ ಆರೋಪಿ ಸಣ್ಣಬೋರಯ್ಯನವರು ನನ್ನ ತಂದೆ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಮಕ್ಕಳು. ಅವರೆಂದರೆ ನಾನು ಮತ್ತು ನನ್ನ ಅಣ್ಣ-ಪವನ್. ನಾವಿಬ್ಬರು ವಿದ್ಯಾಭ್ಯಾಸ ಮಾಡುತ್ತಿದ್ದೇವೆ.

2. ನನ್ನ ತಂದೆ ಕೆ ಇ ಬಿ ಯಲ್ಲಿ ಲೈನ್ ಮೆನ್ ಆಗಿ ಕೆಲಸ ಮಾಡುತ್ತಿದ್ದಾರೆ . ನನ್ನ ತಾಯಿ ಗೃಹಿಣಿಯಾಗಿದ್ದರು. ನನ್ನ ತಾಯಿ ದಿಃ

11.8.2017 ರಂದು ಮೃತಪಟ್ಟಿದ್ದಾರೆ .

3. ನನ್ನ ತಾಯಿಯನ್ನು ನನ್ನ ತಂದೆ ಕೊಲೆ ಮಾಡಿದ್ದಾರೆ. ಆ ರೀತಿ ಕೊಲೆ ಮಾಡುವುದನ್ನು ನಾನು ನೋಡಿದ್ದೇನೆ. ಆ ದಿವಸ ನಾನು ಮನೆಯ ಹಾಲ್ ನಲ್ಲಿ ಇದೆ . ನನ್ನ ತಾಯಿ ಮೃತಪಡುವ ದಿವಸ ನಮ್ಮ ಮನೆಯಲ್ಲಿ ನನ್ನ ತಂದೆ , ತಾಯಿ ಮತ್ತು ನಾನು ಇದ್ದೆವು. ಆ ದಿವಸ ನನ್ನ ಅಣ್ಣ ಪವನ್ ಮನೆ ಪಾಠಕ್ಕಾಗಿ ಹೋಗಿದ್ದ. ನಾನು ಕೂಡ ಮನೆಪಾಠಕ್ಕೆ ಹೋಗುವ ಪರಿಪಾಠ ಇಟ್ಟುಕೊಂಡಿದ್ದೆ , ಆ ದಿವಸ ಹೋಗಿರಲಿಲ್ಲ.

4. ನಾನು ಮತ್ತು ನನ್ನ ಅಣ್ಣ ಒಬ್ಬರೇ ಶಿಕ್ಷಕಿಯ ಬಳಿ ಮನೆ ಪಾಠಕ್ಕೆ ಹೋಗುತ್ತಿದ್ದೆವು.

5. ನನ್ನ ತಂದೆ ಮತ್ತು ತಾಯಿ ಪ್ರತಿನಿತ್ಯ ಜಗಳವಾಡುತ್ತಿದ್ದರು , ಅವರ ನಡುವೆ ಪರಸ್ಪರ ಅನ್ಯೋನ್ಯತೆ ಇರಲಿಲ್ಲ. ಸಂತೆ ಸಾಮಾನು ಇಲ್ಲದಿದ್ದರೆ, ಮನೆಯಲ್ಲಿ ಅಡುಗೆ ಮಾಡದಿದ್ದರೆ ತಂದೆ-ತಾಯಿಯ ನಡುವೆ ಜಗಳವಾಗುತ್ತಿತ್ತು.

6. ನನ್ನ ತಾಯಿ ಮೃತಪಡುವ ದಿವಸ ಆಕೆ ಮತ್ತು ನನ್ನ ತಂದೆಯ ನಡುವೆ ಯಾವುದೇ ಜಗಳವಾಗಿರಲಿಲ್ಲ.

7. ನನ್ನ ತವರುಮನೆಗೆ ಹೋಗಬೇಕು ಎಂದು ತಾಯಿ ಮಾತನಾಡಿದರು ಅದಕ್ಕೆ ನನ್ನ ತಂದೆ ತಾಯಿಯ ಜೊತೆಯಲ್ಲಿ ಜಗಳವಾಡಿದ್ದಾರೆ . ಆಗ ನನ್ನ ತಂದೆ ಯಾಕೆ ತವರುಮನೆಗೆ ಹೋಗುತ್ತೀಯಾ ಎಂದು ಹೇಳಿ ನನ್ನ ತಾಯಿಯ ಕಪಾಲಕ್ಕೆ ಹೊಡೆದರು . ಆಗ ನನ್ನ ತಾಯಿ ಕೆಳಕ್ಕೆ ಬಿದ್ದರು. ಆಗ ನನ್ನ ತಂದೆ ನನ್ನ ತಾಯಿಯ ಕಾಲುಗಳನ್ನು ಹಿಡಿದುಕೊಂಡು ಎಳೆದುಕೊಂಡು ರೂಂಗೆ ಹೋದರು. ರೂಂನ ಬೀರುವಿನಲ್ಲಿದ್ದ ಸೀರೆಯನ್ನು ತೆಗೆದು ನನ್ನ ತಾಯಿಗೆ ನೇಣುಹಾಕಿದರು. ಆಗ ನಾನು ಅಬ್ಬಬ್ಬಾ ಎಂದು ಕಿರುಚಿಕೊಂಡೆ. ಆಗ ನನ್ನ ತಂದೆ ಏನಕ್ಕೆ ಕಿರುಚುತ್ತಿದ್ದೀಯಾ ಎಂದು ಹೇಳಿ ನನಗೆ ಹೆದರಿಸಿದರು. ನಾನು ಕಿರುಚಿಕೊಂಡಾಗ ಅಕ್ಕಪಕ್ಕದ ಮನೆಯವರು ಬರಲಿಲ್ಲ.

8. ಆನಂತರ ನನ್ನ ತಂದೆ ರೂಂನ ಕದ ಹಾಕಿಕೊಂಡು ಬಂದು ನನ್ನನ್ನು ಚೇರ್ ನಲ್ಲಿ ಕೂರಿಸಿ ಟಿ ವಿ ಹಾಕಿ ಟಿ ವಿ ನೋಡುವಂತೆ ನನಗೆ ಹೇಳಿದರು. ಸ್ವಲ್ಪ ಹೊತ್ತಿನ ನಂತರ ನನ್ನ ತಂದೆ ರೂಂನ ಬಾಗಿಲಿಗೆ ಅಳವಡಿಸಲಾದ ಲಾಕ್ ಹಾಕಿಕೊಂಡು ಬಂದರು.

9. ಅದಾದ ಒಂದು ಗಂಟೆಯ ನಂತರ ನನ್ನ ಅಣ್ಣ ಪವನ್ ಮನೆಪಾಠ ಮುಗಿಸಿಕೊಂಡು ಮನೆಗೆ ಬಂದ. ಅಮ್ಮ ಎಲ್ಲಿ ಎಂದು ತಂದೆಯನ್ನು ಕೇಳಿದ . ಆಗ ನನ್ನ ತಂದೆ ರೂಂ ನಲ್ಲಿ ಇದ್ದಾಳೆ ಹೋಗಿ

ನೋಡು ಎಂದು ಆತನಿಗೆ ಹೇಳಿದರು.

10. ಅದಾದ ನಂತರ ನನ್ನ ಅಣ್ಣ ಕಿರುಚಿದ. ಆನಂತರ ಆತ ಕಿಟಕಿಯ ಸಂದಿನಿಂದ ನನ್ನಮ್ಮನನ್ನು ನೋಡಿದ. ಅಮ್ಮ ನೇಣುಹಾಕಿಕೊಂಡಿದ್ದಾಳೆ ಎಂದು ನನ್ನಣ್ಣ ತಂದೆಗೆ ತಿಳಿಸಿದ . ಆಗ ನನ್ನ ತಂದೆ ಹೆಂಡತಿ ನೇಣುಹಾಕಿಕೊಂಡಿದ್ದಾಳೆ ಎಂದು ಅಕ್ಕಪಕ್ಕದವರನ್ನು ಕರೆಯಿಸಿಕೊಂಡರು.

11. ಅದಾದ ನಂತರ ರೂಂನ ಬಾಗಿಲನ್ನು ಒಡೆಸಿ ಅಮ್ಮನನ್ನು ನೇಣಿನಿಂದ ಕೆಳಗಿಳಿಸಿ, ಅಮ್ಮನ ಶವವನ್ನು ಮಂಚದ ಮೇಲೆ ಮಲಗಿಸಿದರು.ಆನಂತರ ಪೆಂಡಾಲ್ ಹಾಕಿಸಿ ನನ್ನ ಅಣ್ಣನ ಮುಖಾಂತರ ನನ್ನ ತಾಯಿಯ ತವರುಮನೆಯವರಿಗೆ ಪೋನು ಮಾಡಿಸಿದರು.

12. ನಮ್ಮ ತಾಯಿಯ ಕಡೆಯವರು ಬರುತ್ತಾರೆ ಎಂದು ತಿಳಿದು ನನ್ನ ತಂದೆ ಬೀರುವಿನಲ್ಲಿದ್ದ ಒಡವೆಗಳು ಮತ್ತು ದಾಖಲೆಗಳನ್ನು ತೆಗೆದುಕೊಂಡು ಪಕ್ಕದ ಸೈಟಿನ ಮೂಲಕ ಓಡಿಹೋದರು.

13. ನನ್ನ ಅಣ್ಣ ಮನೆಪಾಠದಿಂದ ಬಂದಾಗ ಅಮ್ಮ ಹೇಗೆ ಸತ್ತಳು ಎಂದು ಆತನಿಗೆ ತಿಳಿಸಲಿಲ್ಲ ಕಾರಣ ಅದಕ್ಕಿಂತ ಮೊದಲು ನನ್ನ ತಂದೆ ನನ್ನನ್ನು ಉದ್ದೇಶಿಸಿ ಯಾರಿಗಾದರೂ ಹೇಳಿದರೆ ನಿನ್ನನ್ನು ಕೂಡ ನಿನ್ನ

ಅಮ್ಮನ ತರಹವೇ ಮಾಡುತ್ತೇನೆ ಎಂದು ಹೆದರಿಸಿದ್ದರು.

14. ಆ ದಿವಸ ನನ್ನ ತಾಯಿ ನೈಟಿ ಧರಿಸಿದ್ದಳು. ಸದರಿ ನೈಟಿಯನ್ನು ಈಗ ನೋಡಿದೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ನನ್ನ ತಂದೆ, ತಾಯಿಗೆ ನೇಣು ಹಾಕಲು ಉಪಯೋಗಿಸಿದ ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸೀರೆಯನ್ನು ಈಗ ನೋಡಿದೆ, ಸದರಿ ಸೀರೆಯನ್ನು ಮು.ಮಾ. 2 ಎಂದು ಗುರುತಿಸಲಾಯಿತು.

15. ನಿಪಿ.3 ರ ಫೊಟೋದಲ್ಲಿ ನನ್ನ ಅಮ್ಮನ ಶವ ಕಂಡುಬರುತ್ತದೆ.

16. ಆ ದಿವಸ ನನ್ನ ತಂದೆ ಹೊಡೆದಿದ್ದರಿಂದ ತಾಯಿಯ ಎಡಗೈಗೆ, ಹೊಟ್ಟೆಯ ಬಳಿ ತರಚಿದ ಗಾಯವಾಗಿತ್ತು.

17. ಈಗ ನೋಡಿದ ಫೊಟೋದಲ್ಲಿ ನಾನು , ನನ್ನ ತಂದೆ , ತಾಯಿ ಮತ್ತು ಅಣ್ಣ ಕಂಡುಬರುತ್ತೇವೆ . ಸದರಿ ಫೊಟೋವನ್ನು ನಿಪಿ 6 ಎಂದು ಗುರುತಿಸಲಾಯಿತು.

18. ನನ್ನ ತಂದೆ ತಾಯಿಯ ನಡುವೆ ಜಗಳವಾಗುತ್ತಿದ್ದ ಸಂಬಂಧವಾಗಿ ನ್ಯಾಯ ಪಂಚಾಯತಿ ಆಗಿತ್ತು. ನನ್ನ ತಾಯಿ ಸತ್ತ ಎರಡು ದಿವಸದ ನಂತರ ನನ್ನ ತಂದೆ ತಾಯಿಯನ್ನು ಕೊಲೆ ಮಾಡಿದ ವಿಚಾರವನ್ನು

ಪೊಲೀಸರಿಗೆ ತಿಳಿಸಿರುತ್ತೇನೆ. ನನಗೆ ಭಯವಾದ್ದರಿಂದ ಆ ವಿಚಾರವನ್ನು ನಾನು ಮೊದಲೇ ಇತರರಿಗೆ ತಿಳಿಸಿರಲಿಲ್ಲ.

19. ಘಟನೆ ಹೇಗೆ ನಡೆಯಿತು ಎಂಬ ಸಂಬಂಧವಾಗಿ ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಕೀಲರಿಂದಃ ಮುಂದೂಡಲಾಗಿದೆ .</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)